# ಬಾಗಲಕೋಟ ವಿಶ್ವವಿದ್ಯಾಲಯ

(ಕರ್ನಾಟಕ ಸರ್ಕಾರದ ರಾಜ್ಯ ಸಾರ್ವಜನಿಕ ವಿಶ್ವವಿದ್ಯಾಲಯ)
**ಮುಧೋಳ ರಸ್ತೆ, ಜಮಖಂಡಿ–587301 ಬಾಗಲಕೋಟೆ ಜಿಲ್ಲೆ**

# Bagalkot University

(A State Public University of Govt. of Karnataka)
Mudhol Road, Jamkhandi-587301 Dist: Bagalkote

**Mail ID** : **bgkujkd@gmail.com**
**Website: https:// bgku.ac.in** **Office of the Registrar** **Tel No:** 08353 – 295123 / 24

Ref. No.: BGKUJ/RO/2024-25/ Date: 15-05-2024

## ಅಧಿಸೂಚನೆ ಪ್ರಕಟಣೆ

**ವಿಷಯ:** 2024-25 ನೇ ಶೈಕ್ಷಣಿಕ ಸಾಲಿಗಾಗಿ ಸ್ನಾತಕ ಹಾಗೂ ಸ್ನಾತಕೋತ್ತರ ವಿವಿಧ ಬಗೆಯ ಸಂಯೋಜನೆಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸುತ್ತಿರುವ ಕುರಿತು.
**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 15-05-2024

ಬಾಗಲಕೋಟ ವಿಶ್ವವಿದ್ಯಾಲಯದ ಸಂಯೋಜನೆ ಮೂಲಕ ವಿಶ್ವವಿದ್ಯಾಯವು ಪಠ್ಯಕ್ರಮ ರಚಿಸಿರುವ ಹಾಗೂ ಶುಲ್ಕಗಳನ್ನು ನಿಗದಿಪಡಿಸಿರುವ ಕೋರ್ಸುಗಳೊಂದಿಗೆ ಬಾಗಲಕೋಟ ಜಿಲ್ಲೆಯ 2024-25 ನೇ ಸಾಲಿಗೆ ಹೊಸ ಮಹಾವಿದ್ಯಾಲಯಗಳನ್ನು ಪ್ರಾರಂಭಿಸಲು ಇಚ್ಛಿಸುವ ಸರ್ಕಾರದ ನಿಯಮಾವಳಿಯಂತೆ ನೋಂದಾಯಿಸಲ್ಪಟ್ಟ ಸಂಘ ಸಂಸ್ಥೆ/ ಟ್ರಸ್ಟಗಳಿಂದ ಮತ್ತು 2023-24 ನೇ ಸಾಲಿನಲ್ಲಿ ಬಾಗಲಕೋಟ ವಿಶ್ವವಿದ್ಯಾಲಯದಿಂದ ತಾತ್ಕಾಲಿಕ ಸಂಯೋಜನೆ ಹೊಂದಿರುವ ಹಾಗೂ 2023-24 ನೇ ಸಾಲಿಗೆ ಶಾಶ್ವತ ಸಂಯೋಜನೆ ಕೊನೆಗೊಳ್ಳುವ ಪ್ರಸ್ತುತವಿರುವ ಮಹಾವಿದ್ಯಾಲಯಗಳಿಂದ ಬಿ.ಎ./ ಬಿ.ಎ-ಕಂಪ್ಯೂಟರ್ ಅಪ್ಲಿಕೇಶನ್/ ಬಿ.ವ್ಹಿ.ಎ/ಬಿ.ಎಸ್ಸಿ./ ಬಿ.ಕಾಂ./ ಬಿ.ಸಿ.ಎ./ ಬಿ.ಬಿ.ಎ./ ಬಿ.ಎಸ್.ಡಬ್ಲ್ಯೂ / ಬಿ.ಇಡಿ./ ಬಿ.ಪಿ.ಇಡಿ./ ಎಂ.ಎ./ ಎಂ.ಕಾಂ./ ಎಂ.ಎಸ್ಸಿ./ ಎಂ.ಇಡಿ./ ಎಂ.ಪಿ.ಇಡಿ./ ಎಂ.ಎಸ್.ಡಬ್ಲ್ಯೂ/ಎಮ್.ವ್ಹಿ.ಎ ಹಾಗೂ ಸರ್ಟಿಫಿಕೇಟ ಕೋರ್ಸ/ ಪಿ.ಜಿ.ಡಿಪ್ಲೋಮಾ ಇತ್ಯಾದಿ ಸ್ನಾತಕ /ಸ್ನಾತಕೋತ್ತರ ಕೋರ್ಸುಗಳಿಗೆ ಮುಂದುವರಿಕೆ/ವಿಸ್ತರಣೆ/ಹೊಸ ಕೋರ್ಸ/ಹೊಸ ವಿಷಯ/ಪ್ರವೇಶ ಮಿತಿ ಹೆಚ್ಚಳ/ಶಾಶ್ವತ ಸಂಯೋಜನೆ/ಶಾಶ್ವತ ಸಂಯೋಜನೆ ನವೀಕರಣ ಸೇರಿದಂತೆ ಇತ್ಯಾದಿ ಸಂಯೋಜನೆಗಳಿಗೆ ಅರ್ಜಿಗಳನ್ನು ಆಹ್ವಾನಿಸಿದೆ. ಮುಂದುವರೆದು, ಮಹಾವಿದ್ಯಾಲಯಗಳ ಹೆಸರು ಬದಲಾವಣೆ, ಮಹಾವಿದ್ಯಾಲಯ ಸ್ಥಗಿತಗೊಳಿಸಲು, ಮಹಾವಿದ್ಯಾಳಯಗಳ ಆಡಳಿತ ಮಂಡಳಿಗಳ ವರ್ಗಾವಣೆ, ಮಹಾವಿದ್ಯಾಲಯದ ಸ್ಥಳಾಂತರ ಇತ್ಯಾದಿಗಳನ್ನು ಮಾಡಬಯಸುವುದಕ್ಕೆ ಸಂಬಂಧಿಸಿದ ದಾಖಲೆಗಳೊಂದಿಗೆ ಸಂಬಂಧಪಟ್ಟ ಶುಲ್ಕ ಹಾಗೂ ಕ್ರೀಡಾ ಶುಲ್ಕ ರೂ. 2500/-ಗಳನ್ನು ಪಾವತಿಸಿ, UUCMS ತತ್ರಾಂಶದ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಯಾವುದೇ ಮಹಾವಿದ್ಯಾಲಯದವರು ಸ್ನಾತಕ ಕೋರ್ಸ ಪ್ರಾರಂಭಿಸಿ ಕನಿಷ್ಠ ಐದು ವರ್ಷಗಳನ್ನು ಪೂರೈಸಿದ್ದಲ್ಲಿ ಅಂತಹ ಮಹಾವಿದ್ಯಾಲಯದವರು ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸಬಹುದಾಗಿದೆ ಮತ್ತು ಎಂ.ಬಿ.ಎ/ ಎಂ.ಸಿ.ಎ/ ಬಿ.ಇಡಿ/ ಬಿ.ಪಿ.ಇಡಿ/ ಎಂ.ಇಡಿ/ ಎಂ.ಪಿ.ಇಡಿ. ಇಂತಹ ಕೋರ್ಸು ಪ್ರಾರಂಭಿಸಲು ಎ.ಐ.ಸಿ.ಟಿ.ಇ/ಎನ್.ಸಿ.ಟಿ.ಇ ಅಥವಾ ಸಕ್ಷಮ ಪ್ರಾಧಿಕಾರದಿಂದ ಕಡ್ಡಾಯವಾಗಿ ಮಾನ್ಯತೆಯನ್ನು ಪಡೆದುಕೊಂಡಿರಬೇಕು. ಹೊಸದಾಗಿ ಸಂಶೋಧನಾ ಕೇಂದ್ರಗಳನ್ನು ಪ್ರಾರಂಭಿಸಲು ಹಾಗೂ ಸಂಶೋಧನಾ ಕೇಂದ್ರಗಳನ್ನು ಮುಂದುವರೆಸಲು ಇಚ್ಛಿಸುವ ಮಹಾವಿದ್ಯಾಲಯಗಳು **OFFLINE** ನಲ್ಲಿ ಅರ್ಜಿ ಸಲ್ಲಿಸುವುದು ಹಾಗೂ ತತ್ಸಂಬಂಧಿ ವಿಚಾರಣೆಗಾಗಿ ವಿಶ್ವವಿದ್ಯಾಲಯವನ್ನು ಸಂಪರ್ಕಿಸುವುದು. ಸಂಯೋಜನೆಗೆ ಸಂಬಂಧಿಸಿದ ಶುಲ್ಕಗಳ ವಿವರ ಮತ್ತು ಇನ್ನಿತರ ಮಾಹಿತಿಯನ್ನು ವಿಶ್ವವಿದ್ಯಾಲಯದ ವೆಬ್ ಸೈಟ್ ವಿಳಾಸ https://bgku.ac.in ನಲ್ಲಿ ನೋಡಬಹುದಾಗಿದೆ.

| ಆನ್ ಲೈನ್ ಮೂಲಕ ಸಂಯೋಜನಾ ಅರ್ಜಿ ಸಲ್ಲಿಸುವುದಕ್ಕಾಗಿ ನಿಗದಿಪಡಿಸಲಾದ ದಿನಾಂಕಗಳು | | |
|---|---|---|
| 1 | ಸಂಯೋಜನಾ ಅರ್ಜಿ ಸಲ್ಲಿಸಲು ದಂಡ ರಹಿತ ಶುಲ್ಕದೊಂದಿಗೆ ಕೊನೆಯ ದಿನಾಂಕ | 25-05-2024 |
| 2 | ಸಂಯೋಜನಾ ಅರ್ಜಿ ಸಲ್ಲಿಸಲು ರೂ. 10,000/-ದಂಡ ಶುಲ್ಕದೊಂದಿಗೆ ಕೊನೆಯ ದಿನಾಂಕ | 27-05-2024 |
| ವಿಶೇಷ ಸೂಚನೆ: ದಿನಾಂಕ: 27-05-2024 ರ ನಂತರ ಸಲ್ಲಿಸುವ ಯಾವುದೇ ಸಂಯೋಜನಾ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. | | |

| | |
|---|---|
| ಸಹಿ/-<br>ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ | ಸಹಿ/-<br>ಕುಲಸಚಿವರು |